ಜೊತೆಯಲ್ಲಿ ಸೇರಿದ್ದಾರೆಂದು ಅವರಿಗೆ ವೇತನವನ್ನು ಸಹ ವಿತರಣೆ ಮಾಡುತ್ತಾ ಇಲ್ಲ ಆ ರೀತಿಯಾಗಿ ಸರ್ಕಾರದವರು ಏನಾದರೂ ಆದೇಶವನ್ನು ಕೊಟ್ಟಿರುತ್ತಾರೆಯೇ ಇದರ ಬಗ್ಗೆ ಹೇಳಿಕೆಯನ್ನು ಕೊಡ ಬೇಕೆಂದು ಕೇಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅಲ್ಲಿಯ ನೌಕರರು ಮಾನ್ಯ ಸದಸ್ಯರು ಹೇಳಿದಂತೆ ಟಿ.ಎಂ.ಎಸ್. ಸದಸ್ಯರಾಗಿದ್ದಾರೆನ್ನತಕ್ಕಂಥದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೇ, ಈ ತೋಟಗಾರಿಕೆ ಇಲಾಖೆಯಲ್ಲಿ ದುಡಿಯುತ್ತಿರತಕ್ಕಂಥ 70 ಜನ ಕಾರ್ಮಿಕರಿಗೆ, ನಾಲ್ಕು ತಿಂಗಳಿಂದ ವೇತನವನ್ನು ಕೊಟ್ಟಿಲ್ಲ. ಕಾರ್ಮಿಕರಿಗೆ ಕೊಡಬೇಕಾದಂಥ ದಿನಗೂಲಿಯನ್ನು ಕೊಡದೆ ಇದ್ದುದರಿಂದ ಅವರು ಜೀವನವನ್ನು ಮಾಡುವುದೇ ಬಹಳ ಕಷ್ಟವಾಗಿರುತ್ತದೆ. ಇದು ಒಂದು ಗಂಭೀರವಾದ ಪರಿಸ್ಥಿತಿಯಾಗಿರುತ್ತದೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು ಮತ್ತು ಅವರ ವೇತನವನ್ನು ವಿತರಣೆ ಮಾಡುವ ಬಗ್ಗೆ ಕಾರ್ಯ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಸೋಮವಾರ ಈ ವಿಷಯದ ಬಗ್ಗೆ ವಿವರವಾಗಿ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಕ್ಷೇತ್ರ ಸರ್ಕಾರಿ ಕ್ಷೇತ್ರ ತಾಪೂ ಕೂಡ ಆಕ್ಷೇತ್ರದ ಪ್ರತಿನಿಧಿಗಳಾಗಿದ್ದೀರಿ. ಸರ್ಕಾರಿ ಕ್ಷೇತ್ರದಲ್ಲಿಯೇ ಇಂಥ ಪರಿಸ್ಥಿತಿಯಾದರೆ ಕರ್ನಾಟಕಾದ್ಯಂತ ಇರುವ ದಿನಕೂಲಿ ಕಾರ್ಮಿಕರ ಪರಿಸ್ಥಿತಿ ಏನು ಎಂಬುದಾಗಿ ಕೇಳಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಸಚಿವರು ಸೋಮವಾರ ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ.

1-00p.m.

(ii) ವಿಷಯ.—ಚಿತ್ರದುರ್ಗ ಜಿಲ್ಲೆಯ ಜನತಾ ಮನೆಗಳ ಬಗ್ಗೆ

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಜನತಾ ಮನೆಗಳನ್ನು ನಿರ್ಮಿಸಿದರಿಂದಾಗಿ ಬಾಕಿ ಪೊಲಗನ್ನು ಪಾವತಿ ಮಾಡುವಂತೆ ಒತ್ತಾಯಿಸಿ ತೊಂದರೆಗೊಳಗಾದ ಜನರು ನಡೆಸಿದ ಧರಣಿ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ವಸತಿ ಶಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಚಿತ್ರದುರ್ಗ ಜಿಲ್ಲೆಗೆ 1982–83ನೇ ಸಾಲಿನಲ್ಲಿ 5200 ಮನೆಗಳು ಮಂಜೂರಾಗಿತ್ತು. ಇದಕ್ಕೆ ಹಣ ಬಿಡುಗಡೆ ಮಾಡಲಿಲ್ಲ. 1983-84ನೇ ಸಾಲಿನಲ್ಲಿ 3185 ಮನೆಗಳು ಮಂಜೂರಾಗಿದ್ದು ಈ ಮನೆಗಳನ್ನು 1982-83 ಪ್ರಾರಂಭಿಸಿದ ಮನೆಗಳ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿತ್ತು. 3185 ಮನೆಗಳಿಗೆ ಕೊಡಬೇಕಾಗಿರುವ 63.70 ಲಕ್ಷ ರೂ.ಗಳ ಪೈಕಿ ಈಗಾಗಲೇ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಮೇ–ಜೂನ್ 1983 ರಲ್ಲಿ 1981–82ನೇ ಸಾಲಿನ ಎರಡನೇ ಹಂತದ ಬ್ಯಾಂಕ್ ಸಹಾಯದಿಂದ ಕಟ್ಟಲ್ಪಡುವ ಮನೆಗಳಿಗೆ (1100) 16.50 ಲಕ್ಷ ರೂ.ಗಳ ಪೂರ್ಣ ಸಾಲ ರೂಪದ ಹಣವನ್ನು ಸರಕಾರವು ಬಿಡುಗಡೆ ಮಾಡಿದೆ.

1983-84ನೇ ಸಾಲಿನಲ್ಲಿ ಮಂಜೂರಾದ 3185 ಮನೆಗಳಿಗಾಗಿ ಬಿಡುಗಡೆಯಾಗಬೇಕಾಗಿರುವ ಉಳಿಕೆ ಸಹಾಯಧನಕ್ಕಾಗಿಯೂ (43.70 ಲಕ್ಷ ರೂಪಾಯಿಗಳು) ಮತ್ತು 1982-83 ರಲ್ಲಿ ಪ್ರಾರಂಭಿಸಿದೆ ಎನ್ನಲಾಗಿದ್ದ 1845 ಹೆಚ್ಚುವರಿ ಮನೆಗಳು ಮಂಜೂರಾತಿಗಾಗಿಯೂ, ಪ್ರಸ್ತುತ ಅಂದೋಳನ ವಾಗಿದೆ. ಈ ಹೆಚ್ಚುವರಿ ಮನೆಗಳಿಗೆ 36.90 ಲಕ್ಷ ರೂಪಾಯಿ ಸಹಾಯಧನವು ಬೇಕಾಗಿರುತ್ತದೆ.

1981-82ನೇ ಸಾಲಿನ (ಸೀರೀಸ್) ಎರಡನೇ ಹಂತದ ಮನೆಗಳಿಗೆ 400 ಲಕ್ಷ ರೂಪಾಯಿಗಳನ್ನು 1983-84ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಿಗೂ ಮಂಜೂರಾಗಿರುವ ಮನೆಗಳಿಗೆ 386 ಲಕ್ಷ ರೂಪಾಯಿ ಗಳನ್ನು ಸರಕಾರವು ಮುಂಗಡವಾಗಿ ಕೊಟ್ಟಿದೆ. ಇದರಿಂದ ವಿಧಾನ ಮಂಡಲವು ಅನುಮೋದಿಸಿರುವ ಆಯವ್ಯಯದಲ್ಲಿ ಶೇಕಡ 50ಕ್ಕೂ ಹೆಚ್ಚು ಹಣವನ್ನು ಬಿಡುಗಡೆ ಮಾಡಿದಂತಾಗಿದೆ. ವಿಧಾನಮಂಡಲವು ಪೂರ್ತ ಆಯವ್ಯಯಕ್ಕೆ ಒಪ್ಪಿಗೆಕೊಟ್ಟ ನಂತರ ಉಳಿಕೆಯ ಹಣವನ್ನು ಮಂಜೂರು ಮಾಡ ಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಜನತಾ ಮನೆಗಳನ್ನು ಕಟ್ಟಲು ಒಂದು ಕಂತಿನ ಹಣ ಬಿಡುಗಡೆಯಾಗಿ, ಈಗ ಅರ್ಧಂಬರ್ಧ ಗೋಡೆಗಳನ್ನು ಕಟ್ಟಿಕೊಂಡಿದ್ದಾರೆ. ಈಗ ತಾವು ಬಾಕಿ ಹಣ ಕೊಡದೇ ಹೋದರೆ ಮಳೆಗಾಲ ಪ್ರಾರಂಭವಾಗಿರುವುದರಿಂದ ಕಟ್ಟಿರುವ ಗೋಡೆಗಳೆಲ್ಲಾ ಬಿದ್ದುಹೋಗುತ್ತವೆ, ಕೆಲವೆಲ್ಲಾ ಬಿದ್ದು ಹೋಗಿವೆ. ಆದುದರಿಂದ ಬಡಜನರು ಚಿತದುರ್ಗದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ 14 ದಿವಸಗಳಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ತಕ್ಷಣ ತಾವು ಬಾಕಿ ಹಣ ಬಿಡುಗಡೆ ಮಾಡದೆ ಹೋದರೆ, ಮೇಲುಹೋದಿಕೆ, ಮರಮುಟ್ಟು

ಕೊಡದೇಹೋದರೆ ಪೂರ್ತಿ ಮನೆ ಬಿದ್ದುಹೋಗುತ್ತದೆ. ಒಟ್ಟು 43 ಟಕ್ಷ ರೂಪಾಯಿ ಬಾಕಿ ಬರ ಬೇಕಾಗಿದೆ. ಈ ಹಣವನ್ನು ತಕ್ಷಣ ಸರ್ಕಾರದವರು ಮಂಜೂರು ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಉತ್ತರದಲ್ಲಿ ಈ ವಿಚಾರ ತಿಳಿಸಿದ್ದೇನೆ. ಆ ಜಿಲ್ಲೆಗೆ ಕೊಡ ಬೇಕಾದಂಥ 63 ಲಕ್ಷದ 70 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಕೊಡಲಾಗಿದೆ. ಇದರ ಜೊತೆಗೆ 1981-82ನೇ ಸಾಲಿಗೆ ಸೇರಿದ ಮನೆಗಳಿಗೆ ಕೊಡಬೇಕಾದಂಥ ಹಣ $16\frac{1}{2}$ ಲಕ್ಷ ಮತ್ತು ಹುಡ್ಕೋ ನಿಂದ ಬಂದಂಥ 6 ಲಕ್ಷ ಒಟ್ಟು $22\frac{1}{2}$ ಲಕ್ಷ ಆಯಿತು. ಅಂದರೆ ಒಟ್ಟು $42\frac{1}{2}$ ಲಕ್ಷ ರೂಪಾಯಿ ಗಳನ್ನು ಈ ವರ್ಷದಲ್ಲಿ ಕೊಟ್ಟಿದೆ. ಮಾನ್ಯ ಸದಸ್ಯರಲ್ಲಿ ನನ್ನ ಬಿನ್ನಹವೇನೆಂದರೆ, ನಮಗೆ ಆಯವ್ಯಯ ಮಂಜೂರಾಗಿರತಕ್ಕಂಥಾದ್ದು ಸೆಪ್ಟೆಂಬರ್ 30 ರವರೆಗೆ, ಹೌಸಿಂಗಿಗೆ ಇಟ್ಟಿರತಕ್ಕಂಥಾದ್ದು 11 ಕೋಟಿ 60 ಲಕ್ಷ ರೂಪಾಯಿ ಇದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಹಣವನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಮಾನ್ಯ ಸದಸ್ಯರ ಅವಸ್ಥೆ ನಮಗೆ ಮನವರಿಕೆಯಾಗಿದೆ. ಮಾನ್ಯ ಸದಸ್ಯರು ವಿಷಯವನ್ನು ತಿಳಿಸಿದ್ದಾರೆ ಆದರೆ ನಾವು ಆಯವ್ಯಯದ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕಾಗಿದೆ. ಇದು ಒಂದೇ ಜಿಲ್ಲೆಯಲ್ಲಿ ಅಲ್ಲ, ಬೇರೆ ಜಿಲ್ಲೆಗಳಲ್ಲೂ ಈ ಬೇಡಿಕೆಗಳು ಇವೆ. ಎಲ್ಲಾ ಜಿಲ್ಲೆಗಳಿಂದ ಈ ರೀತಿ ಬೇಡಿಕೆಗಳು ಬಂದರೆ ಸುಧಾರಿಸಿಕೊಂಡು ಹೋಗತಕ್ಕಂಥಾದ್ದು ಸರ್ಕಾರದ ಕರ್ತವ್ಯ, ಅಲ್ಲದೆ ಇದಕ್ಕೆ ಒಂದು ಮಿತಿ ಉಂಟು ಖರ್ಚು ಮಾಡಬೇಕಾದ ಹಣದ ಮಿತಿಯೊಳಗೆ ನಾವು ಕೆಲಸ ಮಾಡಬೇಕಾಗುತ್ತದೆ. ಆದಷ್ಟು ಜಾಗ್ರತೆ ಸೆಪ್ಟೆಂಬರ್ ತಿಂಗಳ ನಂತರ ಬಾಕಿ ಕೊಡಬೇಕಾಗಿರತಕ್ಕ ಹಣವನ್ನು ಕೊಡುವುದಕ್ಕೆ ಎಲ್ಲಾ ಪ್ರಯತ್ನ ವನ್ನು ಮಾಡುತ್ತೇನೆಂಬ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಸರ್ಕಾರದವರು ಹಣ ಬಿಡುಗಡೆ ಮಾಡುವುದಕ್ಕೆ ಮುಂಚಿತವಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಇದ್ದ ಫಿಕ್ಸೆಡ್ ಹಣವನ್ನು ಇದಕ್ಕಾಗಿ ಖರ್ಚು ಮಾಡಿಬಿಟ್ಟರು. ತಾವು ಹಣ ಬಿಡುಗಡೆ ಮಾಡಿದಮೇಲೆ ಅದಕ್ಕೆ ಅಡ್ಜಸ್ಟ್‌ಮಾಡಿಕೊಂಡಿದ್ದಾರೆ. ಆ ಹಣವನ್ನು ಹಂಚ ಲಾಗಿಲ್ಲ. ಈಗ ಮನೆಗಳು ಹಾಗೆ ಉಳಿದುಕೊಂಡಿರುವುದರಿಂದ ಪ್ರತಿ ದಿನ ಜನ ಬಂದು ಹೋಗುತ್ತಾ ಇದ್ದಾರೆ, ಧರಣಿ ಸತ್ಯಾಗ್ರಹ ಕುಳಿತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, 1845 ಹೆಚ್ಚುವರಿ ಮನೆಗಳನ್ನೇನು ಕಟ್ಟುತ್ತಿ ದ್ದಾರೆ, ಬಹುಶಃ ಅವುಗಳನ್ನು ಅವರು ಅಡ್ವಾನ್ಸ್ ಸ್ಟೇಜ್‌ನಲ್ಲಿ ಕಟ್ಟಿದ್ದಾರೆ ಎನ್ನತಕ್ಕ ಮಾತು ಇದೆ. ಈ ಮನೆಗಳಿಗೆ ಜಿಲ್ಲಾಧಿಕಾರಿಗಳಿಂದ ಹಣ ಬಂದಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ಆ ಮನೆಗಳಿಗೆ ಹಣ ಬಿಡುಗಡೆ ಮಾಡಿಲ್ಲ ಎನ್ನತಕ್ಕ ವಾದ ಬಹಳ ಮುಖ್ಯವಾದುದು ಆಗಿದೆ. ಆದರೆ 1981–82ನೇ ಸಾಲಿನಲ್ಲಿ ಹಿಂದಿನ ಸರ್ಕಾರದವರು 1 ಲಕ್ಷದ 2 ಸಾವಿರ ಮನೆಗಳನ್ನು ಕಟ್ಟು ತ್ತೇವೆ ಎನ್ನತಕ್ಕ ಒಂದು ಘೋಷಣೆ ಮಾಡಿದ್ದರು. ಆದರೆ ಅದಕ್ಕೆ ತಗಲತಕ್ಕ ಹಣವನ್ನು ಖರ್ಚು ಮಾಡುವುದಕ್ಕೆ ಅವರು ಇಡುವುದಕ್ಕೆ ಆಗಲಿಲ್ಲ, ಇಡಲಿಲ್ಲ. ಆ ಕಾರಣಕ್ಕೋಸ್ಕರವಾಗಿ 1500ರೂಪಾಯಿ ಗಳನ್ನು ಯಾರು ಅವರಿಗೆ ಕೊಟ್ಟರು ಎನ್ನುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಅದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು 3–4 ದಿನ ಟೈಮ್ ಬೇಕಾಗುತ್ತದೆ. ಅದಕ್ಕೆ ಟಿ. ಡಿ. ಬಿ. ಯವರು ಏನಾ ದರೂ ಹಣ ಕೊಟ್ಟಿದ್ದಾರೋ ಎಂಬುದು ಗೊತ್ತಿಲ್ಲ, ಇಲ್ಲ ಫಲಾನುಭವಿಗಳು ಯಾರಿದ್ದಾರೆ ಅವರೇ ಹಾಕಿ ಕಟ್ಟಿಕೊಂಡಿರಬಹುದು. ಆದರೆ ಸರ್ಕಾರ ಮಂಜೂರು ಮಾಡುತ್ತೇವೆಂದು ಹೇಳಿರತಕ್ಕ ಮನೆಗಳಿಗೆ ಹಣವನ್ನು 1981–82ನೇ ಸಾಲಿಗೆ ಹಣವನ್ನು ಇಡಲಿಲ್ಲ. ನಾವು ಅದಕ್ಕೋಸ್ಕರವಾಗಿ 1981–82ನೇ ಸಾಲಿಗೆ ಕೊಡಬೇಕಾಗಿದ್ದ ಇಪ್ಪತ್ತೆರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸೆಪ್ಟೆಂಬರ್ 30ರ ನಂತರ ಇನ್ನು ವಿಶೇಷವಾದ ರೀತಿಯಲ್ಲಿ ಮಾನ್ಯ ಶಿವಮೂರ್ತಿಯವರ ಬೇಡಿಕೆಗಳೇನಿವೆ ಅದನ್ನು ಗಮನ ದಲ್ಲಿಟ್ಟುಕೊಂಡು ಅವರ ಬೇಡಿಕೆಯನ್ನು ಪೂರೈಸುವುದಕ್ಕೆ ಹಂತಹಂತವಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, 1845 ಹೆಚ್ಚುವರಿ ಮನೆಗಳೇನಿವೆ, ಇವುಗಳನ್ನು ಚಿತ್ರ ದುರ್ಗದಲ್ಲಿ ಸಾಮಾನ್ಯವಾಗಿ ಬಡ ಮಧ್ಯಮ ವರ್ಗದವರು ಮತ್ತು ಹೆಚ್ಚಾಗಿ ಹರಿಜನರೇ ಕಟ್ಟಿಕೊಂಡಿ ದ್ದಾರೆ, ಇವೆಲ್ಲಾ ಅರ್ಧಂಬರ್ಧವಾಗಿದೆ. ಈಗ ಮಳೆಗಾಲ ಬೇರೆ, ತಾವು ಅವರಿಗೆ ಹಣವನ್ನು ಒದಗಿಸದೆ ಹೋದರೆ ಕಟ್ಟಿರತಕ್ಕ ಮನೆಗಳೂ ಸಹ ಮಳೆಗೆ ಬಿದ್ದು ಹೋಗುತ್ತವೆ. ಅವರ ಈ ಸಮಸ್ಯೆಯನ್ನು ಬಗೆಹರಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅವರಿಗೆ ಏನು ಹಣ ಕೊಡಬೇಕಾ ಗಿದೆಯೋ ಅದನ್ನು ಕೂಡಲೇ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—1845 ಹೆಚ್ಚುವರಿ ಮನೆಗಳನ್ನು ಏನು ಕಟ್ಟಿಕೊಂಡಿದ್ದಾರೆ. ಅದಕ್ಕೂ ನಮಗೂ ಸಂಬಂಧವಿಲ್ಲವೆಂದು ಮಾನ್ಯ ಸಚಿವರು ಉತ್ತರ ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್.—1982—83 ರಲ್ಲಿ 1 ಲಕ್ಷದ 2 ಸಾವಿರ ಮನೆಗಳನ್ನು ಕಟ್ಟುತ್ತೇ ವೆಂದು ಆಗಿನ ಸರ್ಕಾರ ಘೋಷಣೆ ಮಾಡಿದೆ, ಆದರೆ ಆ ರೀತಿಯಾಗಿ ಮನೆಗಳನ್ನು ಕಟ್ಟುವುದಕ್ಕೆ

ಹಣವನ್ನು ಮಂಜೂರು ಮಾಡಿಲ್ಲ. ಘೋಷಣೆ ಮಾಡಿದ್ದಾರೆ ಎನ್ನುವ ಕಾರಣಕ್ಕೋಸ್ಕರವಾಗಿ ಬೇರೆ ಕಡೆ ಇಂಥಾ ಪರಿಸ್ಥಿತಿ ಉದ್ಭವವಾಗಿದೆ, ಚಿತ್ರದುರ್ಗಕ್ಕೆ ಸೀಮಿತವಾಗಿ ಮಾತ್ರ ನಾನು ಹೇಳಿದ್ದೇನೆ. ಅಲ್ಲಿ 1845 ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಯಾರು 1500 ರೂಪಾಯಿ ಗಳನ್ನು ಕೊಟ್ಟಿದ್ದಾರೆ ಎನ್ನೆತಕ್ಕದ್ದು ಗೊತ್ತಿಲ್ಲ ವೆನ್ನತಕ್ಕ ಮಾತನ್ನು ಹೇಳಿದ್ದೇನೆ. ಇನ್ನು ಸೆಪ್ಟೆಂಬರ್ 30ರ ನಂತರ ಈ ಮನೆಯಲ್ಲಿ ಬಜೆಟ್ ಪಾಸ್ ಆದ ನಂತರ ಹಂತಹಂತವಾಗಿ ಮಿಕ್ಕ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, 386 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ, ಇದರಲ್ಲಿ ಚಿತ್ರದುರ್ಗ ಜಿಲ್ಲೆಗೆ ಬರತಕ್ಕಂಥ ಹಣವೆಷ್ಟು ? 1982-83 ರಲ್ಲಿ ಬಾಕಿ ಇದ್ದದ್ದಕ್ಕೆ ಸ್ಯಾಂಕ್ಷನ್ ಮಾಡಿದ್ದೀರಿ ಅಲ್ಲಿಗೆ 1983-84 ರಲ್ಲಿ ಯಾವ ಹೊಸ ಮನೆಗಳಿಗೂ ಸ್ಯಾಂಕ್ಷನ್ ಮಾಡಿಲ್ಲವೆಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಿಲ್ಲ, ಹೌದು. ಈ ವರ್ಷ ಹೊಸದಾಗಿ ನಾವು ಯಾವ ಮನೆ ಗಳನ್ನೂ ತೆಗೆದುಕೊಂಡಿಲ್ಲ. 3,185 ಮನೆಗಳಿಗೆ ಕೂಡಬೇಕಾಗಿರತಕ್ಕ ಹಣ 63.70 ಲಕ್ಷ ರೂಪಾ ಯಿಗಳಲ್ಲಿ ನಾವು 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರ ಜೊತೆಗೆ 1981—82 ರಲ್ಲಿ ಸೀರೀಸ್‌ಗೆ ಕೊಡತಕ್ಕ ಮನೆಗಳಿಗೆ ನವ್ಮ ಸರ್ಕಾರದಿಂದ 16½ ಲಕ್ಷ ಮತ್ತು ಹುಡ್ಕೋ ನೆರವಿ ನಿಂದ 6 ಲಕ್ಷ ಒಟ್ಟು 22½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—1981—82ನೇ ಇಸ್ವಿಯ ಎರಡನೇ ಸೀರಿಸ್‌ನ ಹಣವನ್ನೇನೊ ಕೊಟ್ಟಿದ್ದೀರಿ ಆದರೆ 3ನೇ ಹಂತದ ದುಡ್ಡು ಬಾಕಿ ಉಳಿದಿದೆ ಅದನ್ನು ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇಲ್ಲವೆಂದು ಹೇಳಲಿಲ್ಲವಲ್ಲಾ.

ಶ್ರೀ ಕೆ. ಎಚ್. ರಂಗನಾಥ್.—ಈಗ ಅಲ್ಲಿ ಮಳೆ ಬೀಳುತ್ತಿದೆ, ಮನೆಗಳು ಬಿದ್ದು ಹೋಗುವ ಸ್ಟೇಜ್‌ನಲ್ಲಿದೆ ಅದುದರಿಂದ ಬೇರೆ ಯಾವುದಾದರೂ ದುಡ್ಡನ್ನು ಆಡ್ಜಸ್ಟ್ ಮಾಡಿ ರಿಲೀಜ್ ಮಾಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಆದುದರಿಂದ ಮಾನವೀಯತೆಯ ದೃಷ್ಟಿಯಿಂದ ನೋಡಿ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪ್ರಯತ್ನ ಮಾಡಿದ್ದೇನೆ. ಅಲ್ಲಿರತಕ್ಕ ವಿಷಯವನ್ನು ತಿಳಿದು ಕೊಂಡು ಹಣಕಾಸಿನ ಇಲಾಖೆಗೆ ಇದರ ಬಗ್ಗೆ ತೀವ್ರವಾದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಮತ್ತು ಏನಾದರೂ ಮಾಡಿ ಇದಕ್ಕೆ ಹಣ ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಂತ್ರಿಗಳ ಕಳಕಳಿಯ ಬಗ್ಗೆ ಸಂಶಯ ಇಲ್ಲ. ಆದರೆ 1981-82 ರದ್ದು ರಿಲೀಸ್ ಆಗದೆ ಇರುವಾಗ ಏತಕ್ಕೆ ಆಗಿಲ್ಲ. ಏನಾಗಿದೆ ಎಂಬುದನ್ನು ನೋಡುವುದು ಬೇಡವೆ? 3ನೇ ಕಂತನ್ನು ಬಿಡುಗಡೆ ಮಾಡಿದರೆ ಅರ್ಥಕ್ಕೆ...,

ಶ್ರೀ ಎ. ಲಕ್ಷ್ಮೀಸಾಗರ್.—ಸಾಧ್ಯತೆ ಇದ್ದರೆ ಪ್ರಯತ್ನ ಮಾಡುತ್ತೇನೆಂಬ ಮಾತನ್ನು ಆಗಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಸಾಧ್ಯತೆ ಇದ್ದೇ ಇರುತ್ತದೆ.

ಶ್ರೀ ಕೆ. ಶಿವಮೂರ್ತಿ.—ಇವತ್ತಿನ ದಿವಸ ಬಡವ ಬೀದಿಯಲ್ಲಿ ಬಿದ್ದಿದ್ದಾನೆ. ಸರ್ಕಾರದವರು ಈ ರೀತಿ ನಿರ್ಲಕ್ಷ್ಯ ಭಾವನೆ ತಾಳಬಾರದು.

ಒಬ್ಬ ಮಾನ್ಯ ಸದಸ್ಯರು.—ಹಿಂದೆ ಭರವಸೆ ಕೊಟ್ಟಂತೆ 5200 ಮನೆಗಳನ್ನು ಮಂಜೂರ್ಮಾಡಿ ದ್ದಾರೆ. ಆದರೆ ಇವರು 3300 ಮನೆಗಳಿಗೆ ಮಾತ್ರ ಹಣವನ್ನು ಒದಗಿಸುತ್ತೇವೆಂದರೆ ಉಳಿದವರಿಗೆ ಕೊಡುವುದು ಯಾವಾಗ?

ಶ್ರೀ ಎ. ಲಕ್ಷ್ಮೀಸಾಗರ್,—ಹಣ ಕೊಡಬಾರದೆಂದು ಹೇಳಿಲ್ಲ.

ಅಧ್ಯಕ್ಷರು.—ಅವರಿಗೆ ವಿಷಯ ಅರ್ಥವಾಗಿದೆ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅರ್ಥವಾಗಿಲ್ಲವೆಂದು ಅಲ್ಲ. ಮಂತ್ರಿಗಳು, ಚಿತ್ರದುರ್ಗ ಜಿಲ್ಲೆ ಯಲ್ಲಿ 5200ರಲ್ಲಿ 3300 ಮನೆಗಳಿಗೆ ಮಾತ್ರ ಹಣ ಒದಗಿಸಿದ್ದೇವೆಂದು ಹೇಳಿದರು. ಹೀಗಾಗಿ ಅಲ್ಲಿ ಅರ್ಧಂಬರ್ಧ ಮನೆಗಳನ್ನು ಕಟ್ಟಿದರು. ಇದು ಇಡೀ ಪ್ರಾಂತಕ್ಕೆ ಆವರಿಸಿರುವ ಸಮಸ್ಯೆಯಾಗಿದೆ. ಸರ್ಕಾರ ಹಣ ಒದಗಿಸಿರುವುದು 3300 ಮನೆಗಳಿಗೆ ಮಾತ್ರ, ಉಳಿದ ಮನೆಗಳವರಿಗೆ ಒದಗಿಸುವುದು ಯಾವಾಗ ? ಅವರಿಗೂ ಸರ್ಕಾರ ಹಣ ಕೊಡಬೇಕು. ಹೊಸ ಸರ್ಕಾರ ಬಂದಮೇಲೆ ನೀವು ಏನು ಕೊಟ್ಟಿದ್ದೀರಿ ? ಯಾರೋ ಮಾಡಿದ ಕೂಸಿಗೆ ನಿಮ್ಮ ಹೆಸರು ಏತಕ್ಕೆ ಹೇಳಬೇಕು ?

ಅಧ್ಯಕ್ಷರು.—ಅದನ್ನು ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಕ್ಲಾರಿಫೈ ಮಾಡುವುದು ಒಳ್ಳೆಯದು, ಸಚಿವರು ಉತ್ತರಿಸುವಾಗ 1½ ಸಾವಿರ ರೂಪಾಯಿ ಖರ್ಚು ಮಾಡಿ ಅರ್ಧ ಮನೆ ಕಟ್ಟಿದ್ದಾರೆ ಅದು ನಮ್ಮಲೆಕ್ಕ ದಲ್ಲಿ ಇಲ್ಲ ಎಂದರು. ಅವರು ಎಲ್ಲಿಂದ ಕಟ್ಟಿದ್ದಾರೆಂಬುದು ಗೊತ್ತಿಲ್ಲವೆಂದು ಹೇಳಿದರು ಇದು ಬಹಳ

ಗಂಭೀರವಾದ ವಿಚಾರ. ಈ ವರ್ಷದ ಬಡ್ಜೆಟ್ ಬಂದರೂ ಕೂಡ ಆ ಬಾಬಿಗೆ ಹಣ ಇಟ್ಟಿಲ್ಲ.

ಅಧ್ಯಕ್ಷರು.--ಮನೆಯನ್ನು ಯಾವ ಲೆಕ್ಕದಲ್ಲಿ ಕಟ್ಟಿದ್ದಾರೆಂಬ ಲೆಕ್ಕ ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.---ಇದು ಅಷ್ಟು ಸುಲಭ ಇಲ್ಲ. ಈ ಹಿಂದೆ ಈ ವಿಚಾರ ಬಂದಾಗ ನಾನು ನೋಡಿಕೊಂಡು ಹೇಳುತ್ತೇನೆಂದರು. ಆದರೆ ಇವತ್ತೂ ಕೂಡ ಸಚಿವರು ನೋಡಿ ಕೊಂಡು ಹೇಳುವುದೇನೆಂದರೆ ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡಿರುವುದು ಯಾವ ಲೆಕ್ಕದಲ್ಲಿ ಎಂದು ಸರ್ಕಾರದ ಲೆಕ್ಕಕ್ಕೆ ಬಂದಿಲ್ಲವೆಂದು. 1981-82 ರಲ್ಲಿ ಮನೆ ಕಟ್ಟುವಾಗ ಬಿ.ಡಿ.ಎ. ಏಡೆಂಟಿಪೈ ನೂಡಿದ ಮೇಲೆ ಮನೆ ಕಟ್ಟಿದೆ. ಮನೆಯನ್ನು ವೈಯಕ್ತಿಕವಾಗಿ ಯಾರು ಕಟ್ಟಿ ದ್ದಾರೆ ಅವರಿಗೆ ಹಣ ಬಿಡುಗಡೆ ಮಾಡಬೇಕೆಂದು ಯಾವ ಸದಸ್ಯರು ಹೇಳಿಲ್ಲ, ಬಿ,ಡಿ.ಎ. ಅವರು ಯಾರಿಗೆ ಮನೆಗಳನ್ನು ಮಂಜೂರ್ಮಾಡಿದ್ದಾರೆ ಅವರಿಗೆ ಒಂದು ಮತ್ತು ಎರಡನೇ ಹಂತದ ಹಣ ಹೋಗಿದೆ. ಅಂಥದಕ್ಕೆ ಉಳಿದ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳುತ್ತಿದ್ದೇವೆ, ಈ ಬಗ್ಗೆ ಸರ್ಕಾರ ಉತ್ತರಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್,--ಮತ್ತೊಮ್ಮೆ ಹೇಳುತ್ತೇನೆ, 1500 ರೂಪಾಯಿ ಹೇಗೆ ಬಂತು ಎಂದು ನನ್ನ ಹತ್ತಿರ ಮಾಹಿತಿ ಇಲ್ಲ. ಎರಡು ದಿನಗಳಿಂದ ಪ್ರಯತ್ನ ಮಾಡುತ್ತಿದ್ದೇನೆ; ಟೆಲಿಫೋನ್ ಕೆಟ್ಟಿರುವುದರಿಂದ ಕನೆಕ್ಷನ್ ಸಿಗುತ್ತಿಲ್ಲ. ನಾನು ಹೇಳಿದ್ದು ಇಷ್ಟೆ. ಸೆಪ್ಟಂಬರ್‌ರವರೆಗೆ ಮಾತ್ರ ಹಣ ಮಂಜೂರಾಗಿರುವುದು. ಇದರಲ್ಲಿ ಅರ್ಧ ಹಣ ಖರ್ಚಾಗಿದೆ. ಒಟ್ಟು 400 ಲಕ್ಷ ರೂಪಾಯಿ ಗಳಲ್ಲಿ 386 ಲಕ್ಷ ರೂಪಾಯಿ ಖರ್ಚಾಗಿದೆ. ಹಣ ಕೊಡಬಾರದೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಯಾವುದು ಅಡ್ವಾನ್ಸ್ ಸ್ಟೇಜ್‌ನಲ್ಲಿ ಕನ್‌ಸ್ಟ್ರಕ್ಷನ್ ಆಗಿದೆ ಅದಕ್ಕೆ ಕೊಡಬೇಕಾದುದು ನಿಜ. ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಖರ್ಚು ಮಾಡಬೇಕಾಗಿದೆ. ಅದಷ್ಟು ಪ್ರಯತ್ನ ಮಾಡಿ ಜಿಲ್ಲಾಧಿಕಾರಿ ಗಳ ಕಛೇರಿಯಲ್ಲಿ ಖರ್ಚಾಗದೆ ಇರತಕ್ಕ ಹಣ ಇದ್ದರೆ, ಅವರೊಡನೆ ಮಾತನಾಡಿ ಆ ಹಣವನ್ನು ಈ ಬಾಬಿಗೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಹಣವನ್ನು ಕೊಟ್ಟೇ ಕೊಡುತ್ತೇವೆಂಬ ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಏಕೆ? ಪ್ರಯತ್ನ ಮಾಡುತ್ತೇವೆಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.--ವಿಷಯ ಚರ್ಚೆಯಾಗಿದೆ, ಪ್ರಶ್ನೆ ಕೇಳುವುದೇನು ಇಲ್ಲ. ನಾನು ಇದರ ಬಗ್ಗೆ ಲಕ್ಷ್ಮೀಸಾಗರ್‌ರವರಿಗೆ ಖಾಸಗಿಯಾಗಿ ಹೇಳಿದ್ದೆ.

ಅಧ್ಯಕ್ಷರು--ಮತ್ತೆ ಖಾಸಗಿಯಾಗಿ ಸದನ ಮುಗಿದ ಮೇಲೆ ಬೇಕಾದರೆ ಹೇಳಿ,

ಶ್ರೀ ಎಸ್. ಬಂಗಾರಪ್ಪ.—ನಾವು ಸರ್ಕಾರ ನಡೆಸಿದವರು. ಒಂದೊಂದು ಸಾರಿ ಖರ್ಚು ಮಾಡುವು ದಕ್ಕೆ ಸರ್ಕಾರದಲ್ಲಿ ಹಣ ಇರುವುದಿಲ್ಲವೆಂಬುದು ನಮಗೂ ಗೊತ್ತಿದೆ. ಪ್ಲಾನನ್ನು ಒಪ್ಪಿದ ಮೇಲೆ ಹಣ ಬಂದಕೂಡಲೇ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.--ಹಣವನ್ನು ಬಿಡುಗಡೆ ಮಾಡುವುದಕ್ಕೆ ಏಕೆ ಇಷ್ಟು ವಿಳಂಬ?

ಶ್ರೀ ಎಸ್. ಬಂಗಾರಪ್ಪ.---ನಾನು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಕೊಟ್ಟಂತಹ ಹಣವನ್ನು ಡೈವರ್ಟ್ ಮಾಡತಕ್ಕದ್ದು ಕಾನೂನಿಗೆ ವಿರುದ್ಧವಾದರೂ ಕೂಡ ಅವಶ್ಯಕತೆ ನೋಡಿ ನೀವು ಖರ್ಚು ಮಾಡುವುದಕ್ಕೆ ಬೇರೆ ದಾರಿ ಇದೆ. ಅದಕ್ಕೆ ನೀವು ಮನಸ್ಸು ಮಾಡಬೇಕು ಅಷ್ಟೆ, ಇವತ್ತಿನ ದಿವಸ, ಮನೆಗಳು ಬಿದ್ದು ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ. ಅದಕ್ಕೋಸ್ಕರ ಸತ್ಯಾಗ್ರಹ ವಗೈರೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ, ಲಕ್ಷ್ಮೀಸಾಗರ್‌ರವರು ಜಿಲ್ಲಾಧಿಕಾರಿಗಳ ಹತ್ತಿರ ಹಣ ಇದ್ದರೆ ನೋಡಿ ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ. ನೀವು ಕಳುಹಿಸಿದರೆ ತಾನೇ ಅವರಿಗೆ ಹಣ ಸಿಗುವುದು? ಹಣ ಕಳುಹಿಸುತ್ತೇವೆಂಬ ದೊಡ್ಡ ಮಾತನ್ನು ಹೇಳಿ ಎಂದು ಕೇಳುವುದಿಲ್ಲ. ಇದರ ಅರ್ಜನ್ಸಿಯನ್ನು ತಿಳಿದುಕೊಂಡರೆ ಗೊತ್ತಾಗುತ್ತದೆ. ನಾನು ಇಲಾಖೆಯವರೊಡನೆ ಮಾತನಾಡಿ ಹಣ ಕಳುಹಿಸುತ್ತೇ ನೆಂದರೆ ಅವರು ಸತ್ಯಾಗ್ರಹ ಮಾಡುವುದನ್ನು ಬಿಡಿಸುತ್ತೇವೆ. ಇಲ್ಲದಿದ್ದರೆ, ನಾಳೆ ದಿವಸ ಜಾಸ್ತಿ ಹಣ ಖರ್ಚು ಮಾಡತಕ್ಕ ಪ್ರಸಂಗ ಬರುತ್ತದೆ. ಆದ್ದರಿಂದ, ಆ ರೀತಿ ತಾವು ಉತ್ತರಿಸಿದರೆ ನಾವು ಅವರಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಕೊಡಬೇಕಾದ ಹಣವನ್ನು ಯಾವುದರಲ್ಲಾದರೂ ಅಡ್ಜಸ್ಟ್ ಮಾಡಿಕೊಳ್ಳಿ. ಈಗ ಪೂರ್ತಿ ಕೊಡುವುದಕ್ಕಾಗದಿದ್ದರೆ ಸ್ವಲ್ಪವಾದರೂ ಕೊಡಿ. ಪೂರ್ತಿ ಹಣ ಸೆಪ್ಟೆಂಬರ್‌ನಲ್ಲಿ ಬಡ್ಜೆಟ್ ಪಾಸ್ ಆದಮೇಲೆ ಸಿಗುತ್ತದೆ. ಸೆಪ್ಟಂಬರ್ ಕೊನೆಯವರೆಗೆ ಎಷ್ಟು ಹಣ ಕೊಟ್ಟಿರುತ್ತೀರಿ ಅದನ್ನು ಅದರಲ್ಲಿ ಅಡ್ಜಸ್ಟ್ ಮಾಡುವುದಕ್ಕೆ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.--ಬಂಗಾರಪ್ಪನವರು ಹೇಳಿದ ಸಲಹೆಯನ್ನು ನಾನು ಸಹಾನುಭೂತಿ ಯಿಂದ ಪರಿಶೀಲಿಸುತ್ತೇನೆ.